## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ 29.03.2023 ರಂದು ಬುಧವಾರ ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

### ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. | ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ. ಶಿವಬಸಪ್ಪ, ಮಾಲಿಪಾಟೀಲ | ಸಿಂಡಿಕೇಟ್ ಸದಸ್ಯರು |
| 3. | ಶ್ರೀ. ನಾಗೇಂದ್ರ ಪ್ರಸಾದ | ಸಿಂಡಿಕೇಟ್ ಸದಸ್ಯರು |
| 4. | ಶ್ರೀ ಮೋಹನ್ ಕುಮಟಾಕರ್ ಎಂ., | ಸಿಂಡಿಕೇಟ್ ಸದಸ್ಯರು |
| 5. | ಶ್ರೀ ಹೆಚ್.ಜಗದೀಶ್ | ಸಿಂಡಿಕೇಟ್ ಸದಸ್ಯರು |
| 6. | ಪ್ರೊ. ವೈ.ಎಂ.ಭಜಂತ್ರಿ | ಸಿಂಡಿಕೇಟ್ ಸದಸ್ಯರು |
| 7. | ಶ್ರೀ ಶಂಕರ ರೆಡ್ಡಿ ಜಿ. | ಸಿಂಡಿಕೇಟ್ ಸದಸ್ಯರು |
| 8. | ಡಾ. ಕೆ. ಸುಭಾಷಚಂದ್ರ | ಸಿಂಡಿಕೇಟ್‌ಸದಸ್ಯರು (ಆನಲೈನ್ ಮುಖಾಂತರ) |
| 9. | ಡಾ. ಯಂಕಣ್ಣ | ಸಿಂಡಿಕೇಟ್‌ಸದಸ್ಯರು (ಆನಲೈನ್ ಮುಖಾಂತರ) |
| 10. | ಡಾ. ಅರುಣಕುಮಾರಿ ಟಿ., | ಸಿಂಡಿಕೇಟ್ ಸದಸ್ಯರು |
| 11. | ಪ್ರೊ. ಪಾರ್ವತಿ ಸಿ.ಎಸ್., | ಸಿಂಡಿಕೇಟ್ ಸದಸ್ಯರು |
| 12. | ಪ್ರೊ. ಎಂ. ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) | ಸಿಂಡಿಕೇಟ್ ಸದಸ್ಯರು |
| 13. | ಪ್ರೊ. ವಿಶ್ವನಾಥ ಎಂ. ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ / ಐಟಂನಂ. | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 1. | ದಿನಾಂಕ 10.02.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | 1) ದಿನಾಂಕ 10.02.2023ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯದ ಎಲ್ಲಾ ನಡವಳಿಗಳನ್ನು ಸಿಂಡಿಕೇಟ್ ದೃಢೀಕರಿಸಿತು. |
| 2. | 2022–23ನೇ ಸಾಲಿಗೆ ರಾಯಚೂರು ವಿಶ್ವವಿದ್ಯಾಲಯ ವ್ಯಾಪ್ತಿಯ ರಾಯಚೂರು ಹಾಗೂ ಯಾದಗೀರಿ ಜಿಲ್ಲೆಗಳ ಸಂಯೋಜಿತ ಕಾಲೇಜುಗಳಿಗೆ ಸಿಂಡಿಕೇಟ್ ಸದಸ್ಯರುಗಳ ತಂಡವು ದಿನಾಂಕ: 13.03.2023 ರಿಂದ 21.03.2023ರ ವರೆಗೆ ಭೇಟಿ ನೀಡಿ ಅವರು ಸಲ್ಲಿಸಿದ ತಪಾಸಣೆ ವರದಿಯ ಮೇಲಿನ ಕುರಿತು ಚರ್ಚೆ. | 2) ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರುಗಳ ತಂಡವು ರಾಯಚೂರು ವಿಶ್ವವಿದ್ಯಾಲಯ ವ್ಯಾಪ್ತಿಯ ರಾಯಚೂರು ಹಾಗೂ ಯಾದಗೀರಿ ಜಿಲ್ಲೆಗಳ ಸಂಯೋಜಿತ ಕಾಲೇಜುಗಳಿಗೆ ಭೇಟಿ ನೀಡಿದ ವಿಸ್ತೃತ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ ಸದರಿ ವರದಿಯಲ್ಲಿರುವ ಅಂಶಗಳ ಬಗ್ಗೆ ಚರ್ಚೆ ಮಾಡಲಾಯಿತು ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಕುರಿತು ಈ ವರದಿಯಲ್ಲಿರುವ ಅಂಶಗಳನ್ನು ಚರ್ಚಿಸಲಾಯಿತು. ಮುಂದುವರೆದು ಗುಲಬರ್ಗಾ ವಿಶ್ವವಿದ್ಯಾಲಯವು ಹಿಂದೆ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರಗಳನ್ನೇ ರಾಯಚೂರು ವಿಶ್ವವಿದ್ಯಾಲಯವು ಪರೀಕ್ಷಾ ಕೇಂದ್ರಗಳೆಂದು ಮುಂದುವರೆಸುತ್ತಿರುವುದನ್ನು ಬದಲಾಯಿಸುವ ಅಥವಾ ಇನ್ನೂ ಹೆಚ್ಚಿನ ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸುವ ಅಧಿಕಾರವನ್ನು ಕುಲಸಚಿವರು (ಮೌಲ್ಯಮಾಪನ) ಹಾಗೂ ಕುಲಪತಿಗಳ ಅಧಿಕಾರಕ್ಕೆ ನೀಡಲು ತೀರ್ಮಾನಿಸಲಾಯಿತು. |

| | | |
|---|---|---|
| 3. | 2022–23ನೇ ಸಾಲಿಗೆ ರಾಯಚೂರು ವಿಶ್ವವಿದ್ಯಾಲಯ ವ್ಯಾಪ್ತಿಯ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಸಂಯೋಜಿತ ಕಾಲೇಜುಗಳಿಗೆ ವಿದ್ಯಾವಿಷಯಕ್ ಪರಿಷತ್ ಸದಸ್ಯರುಗಳ ತಂಡವು ದಿನಾಂಕ: 13.03.2023 ರಿಂದ 20.03.2023ರ ವರೆಗೆ ಭೇಟಿ ನೀಡಿ ಅವರು ಸಲ್ಲಿಸಿದ ತಪಾಸಣೆ ವರದಿಯ ಮೇಲಿನ ಕುರಿತು ಚರ್ಚೆ. | 3) ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಪರಿಷತ್ ಸದಸ್ಯರುಗಳ ತಂಡವು ರಾಯಚೂರು ವಿಶ್ವವಿದ್ಯಾಲಯ ವ್ಯಾಪ್ತಿಯ ರಾಯಚೂರು ಹಾಗೂ ಯಾದಗೀರಿ ಜಿಲ್ಲೆಗಳ ಸಂಯೋಜಿತ ಕಾಲೇಜುಗಳಿಗೆ ಭೇಟಿ ನೀಡಿದ ವಿಸ್ತೃತ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ ಸದರಿ ವರದಿಯಲ್ಲಿರುವ ಅಂಶಗಳ ಬಗ್ಗೆ ಚರ್ಚೆ ಮಾಡಲಾಯಿತು. ಮುಂದುವರೆದು ಈ ವರದಿಯಲ್ಲಿರುವ ಅಂಶಗಳ ಮೇಲೆ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳ ವಿವೇಚನೆಗೆ ಅಧಿಕಾರ ನೀಡಲು ತೀರ್ಮಾನಿಸಲಾಯಿತು. |
| 4. | ರಾಯಚೂರು ವಿಶ್ವವಿದ್ಯಾಲಯದ ಆಡಳಿತ ವಿಭಾಗಕ್ಕೆ ತಾತ್ಕಾಲಿಕವಾಗಿ ಅವಶ್ಯಕತೆವಿರುವ 04 ಯುಯುಸಿಎಂಎಸ್ (UUCMS) ತಾಂತ್ರಿಕ ಅಧಿಕಾರಿಗಳ ನೇಮಕಾತಿಯನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋಧನೆಯನ್ನು ಕಾಯ್ದಿರಿಸಿ ನೇಮಕವಾಗಿರುವ ತಾಂತ್ರಿಕ ಅಧಿಕಾರಿಗಳ ಪಟ್ಟಿಯನ್ನು ಅನುಸಮರ್ಥನೆ (Ratification) ಮಾಡುವ ಕುರಿತು. | 4) ವಿಶ್ವವಿದ್ಯಾಲಯ ಆಡಳಿತ ವಿಭಾಗ, ಪರೀಕ್ಷಾ ವಿಭಾಗ, ವಿದ್ಯಾ ಮಂಡಲ ವಿಭಾಗ ಹಾಗೂ ಹಣಕಾಸು ವಿಭಾಗಗಳಿಗೆ ಸರ್ಕಾರ ನಿರ್ದೇಶನನುಸಾರ 4 ಜನ ಯುಯುಸಿಎಂಎಸ್ (UUCMS) ತಾಂತ್ರಿಕ ಅಧಿಕಾರಿಗಳನ್ನು ತಾತ್ಕಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಸ್ಥಳೀಯ ಪತ್ರಿಕೆಗಳಿಗೆ ಜಾಹೀರಾತು ನೀಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, 6 ಜನ ಅಭ್ಯರ್ಥಿಗಳಿಂದ ಅರ್ಜಿಯನ್ನು ಸಲ್ಲಿಸಿದ್ದು ದಿನಾಂಕ 23.03.2023 ರಂದು ನೇರ ಸಂದರ್ಶನ ಜರುಗಿಸಲಾಗಿ, ವಿಷಯ ತಜ್ಞರಿಂದ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನ ಮಾಡುವ ಮೂಲಕ ಈ ಕೆಳಕಂಡ ಅಭ್ಯರ್ಥಿಗಳನ್ನು, ಆಯ್ಕೆ ಮಾಡಿದ್ದು ಅದರ ಜೊತೆಗೆ ವೇತನವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ನಿರ್ಣಯಿಸಿ ವೇತನ ಹಾಗೂ ವಿವರ ಈ ಕೆಳಗಿನಂತಿದೆ.<br><br>1. ಡಾ. ಇಮ್ಯಾನುವಲ್ ಜೆ., ಪರೀಕ್ಷಾ ವಿಭಾಗ, ಯುಯುಸಿಎಂಎಸ್ (UUCMS) ತಾಂತ್ರಿಕ ಅಧಿಕಾರಿಯನ್ನಾಗಿ, ಮಾಸಿಕ ರೂ. 40,000=00<br>2. ಡಾ. ಶ್ರೀಮಂತ ಸುಧೀರ ಕುಮಾರ ಆಡಳಿತ ವಿಭಾಗ, ಯುಯುಸಿಎಂಎಸ್ (UUCMS) ತಾಂತ್ರಿಕ ಅಧಿಕಾರಿಯನ್ನಾಗಿ, ಮಾಸಿಕ ರೂ. 40,000=00<br>3. ಡಾ. ಭಾಗ್ಯಜ್ಯೋತಿ ವಿದ್ಯಾ ಮಂಡಲ ವಿಭಾಗ ಯುಯುಸಿಎಂಎಸ್ (UUCMS) ತಾಂತ್ರಿಕ ಅಧಿಕಾರಿಯನ್ನಾಗಿ, ಮಾಸಿಕ ರೂ. 40,000=00<br>4. ಶ್ರೀ. ನಾಗರಾಜ ಹಣಕಾಸು ವಿಭಾಗಗಳಿಗೆ ಯುಯುಸಿಎಂಎಸ್ (UUCMS) ತಾಂತ್ರಿಕ ಅಧಿಕಾರಿಯನ್ನಾಗಿ, ಮಾಸಿಕ ರೂ. 30,000=00<br>ಇವರುಗಳ ತಾತ್ಕಾಲಿಕ ನೇಮಕಾತಿಯನ್ನು ಸಭೆಯು ಅನುಸಮರ್ಥಿಸಲಾಯಿತು. |
| 5. | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಚರ್ಚೆ.<br><br>1) ಶಂಕರರೆಡ್ಡಿ ಸಿಂಡಿಕೇಟ್ ಸದಸ್ಯರು ಅಧ್ಯಕ್ಷರ ಅನುಮತಿ ಮೇರೆಗೆ, ಕರ್ನಾಟಕ ಸರ್ಕಾರವು ಇತ್ತೀಚೆಗೆ ಹೊಸ ವಿಶ್ವವಿದ್ಯಾಲಯಗಳ ಉದ್ಘಾಟನೆ ಮತ್ತು ಶಿಲಾನ್ಯಾಸದ ನಾಮಫಲಕದಲ್ಲಿ ಸಿಂಡಿಕೇಟ್ ಸದಸ್ಯರುಗಳ ಹೆಸರು ಇಲ್ಲದಿರುವುದರ ಬಗ್ಗೆ ಚರ್ಚೆ. | <br><br>1)ಕರ್ನಾಟಕ ಸರ್ಕಾರವು ಇತ್ತೀಚೆಗೆ ಹೊಸ ವಿಶ್ವವಿದ್ಯಾಲಯಗಳ ಉದ್ಘಾಟನೆ ಮತ್ತು ಶಿಲಾನ್ಯಾಸ ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 28.03.2023 ರಂದು ಆನ್‌ಲೈನ್ ಮುಖಾಂತರ ನೆರವೇರಿಸಿದ್ದು ಸದರಿ ಶಿಲಾನ್ಯಾಸದ ನಾಮಫಲಕದಲ್ಲಿ ಸಿಂಡಿಕೇಟ್ ಸದಸ್ಯರುಗಳ ಹೆಸರು ಇಲ್ಲದಿರುವುದನ್ನು ಸಿಂಡಿಕೇಟ್ ಸದಸ್ಯರುಗಳು ಚರ್ಚಿಸಿ ಇದರಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರುಗಳ ಹೆಸರುಗಳು ಇಲ್ಲದಿರುವುದನ್ನು ನೋಡಿ ಆಕ್ಷೇಪಣೆ ವ್ಯಕ್ತಪಡಿಸಿ, ಕುಲಪತಿಗಳು ಈ ನಾಮಫಲಕವು ಸರ್ಕಾರದ ಆದೇಶದ ಮೇರೆಗೆ ತುರ್ತಾಗಿ ಮಾಡಿಸಿರುವುದರಿಂದ ಎಲ್ಲಾ ಹೆಸರುಗಳನ್ನು ಸೇರಿಸಲು ಸಾಧ್ಯವಾಗಲಿಲ್ಲ ಎಂದು ತಿಳಿಸಿದರು. ಶಾಶ್ವತವಾದ ನಾಮಫಲಕ ಮಾಡುವಾಗ ಸಿಂಡಿಕೇಟ್ ಸದಸ್ಯರ ಹೆಸರುಗಳನ್ನು |

| | | |
|---|---|---|
| | | ನಮೂದಿಸುವುದಾಗಿ ಕುಲಪತಿಗಳು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸಭೆಯು ಅನುಮೋದನೆಯನ್ನು ನೀಡಿತು. |
| | 2) ದಿನಾಂಕ 10.02.2023ರಂದು ಸಿಂಡಿಕೇಟ್ ಸಭೆ ನಡೆಯುವ ಸಂದರ್ಭದಲ್ಲಿ ಡಾ. ಬಸವಪ್ರಸಾದ, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ ಇವರು ಅನಧಿಕೃತವಾಗಿ ಸಭೆಯಲ್ಲಿ ಪ್ರವೇಶಿಸಿ, ದುರ್ನಡತೆ ತೋರಿರುವ ಕುರಿತು ಮಾನ್ಯ ಕುಲಪತಿಗಳು ಸಭೆಯಲ್ಲಿ ಚರ್ಚಿಸಿದರು. | 2) ದಿನಾಂಕ:10.02.2023ರ ಸಿಂಡಿಕೇಟ್ ನಿರ್ಣಯದಂತೆ ಹಾಗೂ ಡಾ. ಬಸವಪ್ರಸಾದ, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ ಇವರ ಅನುಚಿತ ಹಾಗೂ ಅಶಿಸ್ತಿನ ವರ್ತನೆಯನ್ನು ಖಂಡಿಸಿ ಅವರನ್ನು ಕಪ್ಪುಪಟ್ಟಿಯಲ್ಲಿ ಸೇರಿಸಬೇಕು ಎಂದು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ನಿರ್ಣಯಕೈಗೊಂಡರು. ಕುಲಂಕೂಷವಾಗಿ ಚರ್ಚಿಸಿ 3 ಶೈಕ್ಷಣಿಕ ವರ್ಷಗಳವರೆಗೆ ಅಂದರೆ ದಿನಾಂಕ 29-03-2026 ರವರೆಗೆ ಕಪ್ಪುಪಟ್ಟಿಯಲ್ಲಿ ಸೇರಿಸಲಾಗಿದ್ದು ರಾಯಚೂರು ವಿಶ್ವವಿದ್ಯಾಲಯದ ಶೈಕ್ಷಣಿಕ, ಪರೀಕ್ಷಾ ಹಾಗೂ ಇನ್ನಿತರ ಯಾವುದೇ ಕಾರ್ಯಗಳಿಗೆ ನೇಮಕ ಮಾಡಿಕೊಳ್ಳದೇ ಇರುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು. |
| | 3) ಮಾನ್ಯ ಕುಲಪತಿಗಳು 2023-24ನೇ ಸಾಲಿನ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಸಂಲಗ್ನತೆಯ ಮುಂದುವರಿಸುವ ಕುರಿತು ಸಭೆಯಲ್ಲಿ ಚರ್ಚಿಸಿದರು. | 3) 2023-24ನೇ ಸಾಲಿನ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಸಂಲಗ್ನತೆಯ ಮುಂದುವರಿಕೆಯನ್ನು ಯುಜಿಸಿ ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತೀರ್ಮಾನಿಸಲಾಯಿತು. ಮುಂದುವರೆದು ಉತ್ತಮ ಪ್ರಾಧ್ಯಾಪಕರುಗಳನ್ನು ಒಳಗೊಂಡ ಎಲ್ಐಸಿ ಕಮಿಟಿಗಳನ್ನು ಮುಂದಕ್ಕೆ ನೇಮಕ ಮಾಡುವಂತೆ ತೀರ್ಮಾನಿಸಲಾಯಿತು. |
| | 4) ಅಧ್ಯಕ್ಷರ ಅನುಮತಿ ಮೇರೆಗೆ, ಕುಲಸಚಿವರು ಮೌಲ್ಯಮಾಪನ ಇವರು ವಿಶ್ವವಿದ್ಯಾಲಯಕ್ಕೆ ಉತ್ತರ ಪತ್ರಿಕೆ ನೀಡುತ್ತಿದ್ದಂತಹ ಜಮಿನಿ ಗ್ರಾಫಿಕ್ಸ್ ಬೀದರ ಇವರು ಸಲ್ಲಿಸಿದ ಮನವಿಯ ಕುರಿತು ಚರ್ಚಿಸಿದರು. | 4) ಕುಲಸಚಿವರು ಮೌಲ್ಯಮಾಪನ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಉಪಸಮಿತಿಯಲ್ಲಿ ಶ್ರೀ ಸಂಜಯ್ ಕುಮಾರ ಮೂಥಾ, ಜಗದೀಶ್ ಹೆಚ್. ಸದಸ್ಯರನ್ನು ಒಳಗೊಂಡ ಸಮಿತಿಯು ವಿಶ್ವವಿದ್ಯಾಲಯಕ್ಕೆ ಉತ್ತರ ಪತ್ರಿಕೆ ನೀಡುತ್ತಿದ್ದಂತಹ ಜಮಿನಿ ಗ್ರಾಫಿಕ್ಸ್ ಬೀದರ ಇವರು ಸಲ್ಲಿಸಿದ ಮನವಿಯನ್ನು ಪರಿಶೀಲಿಸಿ ಟೆಂಡರ್‌ನಲ್ಲಿ ನಿರ್ಧಾರವಾದ 10.70 ರೂ. ಪ್ರತಿ ಉತ್ತರ ಪತ್ರಿಕೆಗೆ ದರವನ್ನು ಪರೀಕ್ಷಿಸಬೇಕೆಂದು ನೀಡಿರುವ ಮನವಿಯನ್ನು ಪರಿಶೀಲಿಸಿ, ಉತ್ತರ ಪತ್ರಿಕೆ ತಯಾರಿಸಲು ಬೇಕಾಗುವ ಖಚ್ಚಾ ಸಾಮಾಗ್ರಿಗಳ ಬೆಲೆ ಸುಮಾರು ಪಟ್ಟು ಹೆಚ್ಚಾಗಿದ್ದು, ಪ್ರಸ್ತುತ ದರದ 10.70 ರೂ.ಪೈಸೆ (ಪ್ರತಿ ಉತ್ತರ ಪತ್ರಿಕೆ) ದರದಲ್ಲಿ ವಿಶ್ವವಿದ್ಯಾಲಯಕ್ಕೆ ಉತ್ತರ ಪತ್ರಿಕೆಯನ್ನು ಸರಬರಾಜು ಮಾಡಲು ಅಸಾಯಕತೆಯನ್ನು ವ್ಯಕ್ತಪಡಿಸಿ, ಈ ದರಗಳನ್ನು ಮಾರುಕಟ್ಟೆ ದರಗಳಿಗೆ ತುಲನೆ ಮಾಡಿ 25% ರಷ್ಟು ಪ್ರತಿಶತ ದರವನ್ನು ಏರಿಸಿ ನಿಗದಿಮಾಡಬೇಕೆಂದು ಕೇಳಿಕೊಂಡಿರುತ್ತಾರೆ ಈ ಮನವಿಯನ್ನು ಸೂಕ್ಷ್ಮವಾಗಿ ಪರಾಮರ್ಶಿಸಿ ಬೇರೆ ವಿಶ್ವವಿದ್ಯಾಲಯಗಳಲ್ಲಿಯ ಉತ್ತರ ಪತ್ರಿಕೆಗಳ ದರಗಳನ್ನು ಪರಿಶೀಲಿಸಿ ನಮ್ಮ ವಿಶ್ವವಿದ್ಯಾಲಯದ ದರಗಳು ಅತ್ಯಂತ ಕಡಿಮೆ ಇರುವುದು ತಿಳಿದುಬಂದಿರುತ್ತದೆ. ಹಾಗೂ ಖಚ್ಚಾ ಸಾಮಗ್ರಿಗಳ ಬೆಲೆಯು ದುಬಾರಿಯಾಗಿರುವುದು ಕಂಡುಬಂದಿದ್ದು ಜಮಿನಿ ಗ್ರಾಫಿಕ್ಸ್‌ರವರ 25% ಹೆಚ್ಚಳದ ಮನವಿಯನ್ನು ಪರಿಷ್ಕರಸದೇ ಸಮಿತಿಯು 12.5% ರಷ್ಟು ಹೆಚ್ಚಿಸಿ ಇದು ಕೇವಲ ಮುಂಬರುವ ಪರೀಕ್ಷೆಗಾಗಿ ಮಾತ್ರ ಎಂದು ತೀರ್ಮಾನಿಸಿ, 10.70 ಪೈಸೆ (ಪ್ರತಿ ಉತ್ತರ ಪತ್ರಿಕೆಗೆ) ಇಂದ 12.10 ಪೈಸೆಗೆ ನಿಗದಿಪಡಿಸಿತು. ಇದಕ್ಕೆ ಜಮಿನಿ ಗ್ರಾಫಿಕ್ಸ್ ಕೂಡಾ ಒಪ್ಪಿಗೆ ಸೂಚಿಸಿರುತ್ತದೆ. ಸಮಿತಿಯು ಈ ಬೆಲೆಯ ಪರಿಕ್ಷರಣೆಯನ್ನು ಮುಂಬರುವ ಸೆಮಿಸ್ಟರ್‌ಗೆ ಮಾತ್ರ ಅನ್ವಯಿಸುವಂತೆ ಶಿಫಾರಸ್ಸು ಮಾಡಿರುತ್ತದೆ ಹಾಗೂ ಮುಂದಿನ ಶೈಕ್ಷಣಿಕ ವರ್ಷದ ಪರೀಕ್ಷೆಗಳಿಗೆ ಸರ್ಕಾರದ ನಿಯಮಾನುಸಾರ ಟೆಂಡರ್ ಮುಖಾಂತರ ಖರೀದಿಸಲು ಶಿಫಾರಸ್ಸು ಮಾಡಿರುತ್ತದೆ. ಈ ವರದಿಯನ್ನು ಸಭೆಯಲ್ಲಿ ಮಂಡಿಸಿ ಚರ್ಚಿಸಿ ಉಪಸಮಿತಿ ನೀಡಿದ ಶಿಫಾರಸ್ಸಿನನ್ವಯ ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿ ದರ ಪರಿಕ್ಷರಣೆಯನ್ನು 10.70 ರಿಂದ 12.10 ರಷ್ಟು ದರಕ್ಕೆ ಒಪ್ಪಿಗೆ ಸೂಚಿಸಿ, ಅನುಮೋದಿಸಿತು. |

5) ಅಧ್ಯಕ್ಷರ ಅನುಮತಿ ಮೇರೆಗೆ, ಕುಲಸಚಿವರು ಮೌಲ್ಯಮಾಪನ ಇವರು ರಾಯಚೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಈಗಾಗಲೇ ನಡೆಸಿದ 2021–22 ಮತ್ತು 2022–23ನೇ ಸಾಲಿನ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬರೆದಿದ್ದು, ಈಗಾಗಲೇ 2021–22 ಸಾಲಿನ ಯುಜಿ/ಪಿಜಿ, ಬಿಎಡ್,ಬಿಪಿಎಡ್‌ನ ಮೊದಲನೇ ಸೆಮಿಸ್ಟರ್ ಫಲಿತಾಂಶಗಳು ಪ್ರಕಟವಾಗಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಫಿಸಿಕಲ್ ಅಂಕಪಟ್ಟಿಗಳನ್ನು ಕೊಡುವ ಕುರಿತು ಚರ್ಚಿಸಿದರು.

5) ರಾಯಚೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಈಗಾಗಲೇ ನಡೆಸಿದ 2021–22 ಮತ್ತು 2022–23ನೇ ಸಾಲಿನ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬರೆದಿದ್ದು, ಈಗಾಗಲೇ 2021–22 ಸಾಲಿನ ಯುಜಿ/ಪಿಜಿ, ಬಿಎಡ್, ಬಿಪಿಎಡ್‌ನ ಮೊದಲನೇ ಸೆಮಿಸ್ಟರ್ ಫಲಿತಾಂಶಗಳು ಪ್ರಕಟವಾಗಿವೆ. ಹಾಗಾಗಿ ಯುಜಿಸಿ ಹಾಗೂ ಗೌರವಾನ್ವಿತ ರಾಜ್ಯಪಾಲರ ಅನುಸಾರ ಎಲ್ಲಾ ವಿದ್ಯಾರ್ಥಿಗಳಿಗೆ ಫಿಸಿಕಲ್ ಅಂಕಪಟ್ಟಿಗಳನ್ನು ಕೊಡುವ ಸಂಬಂಧ ಕರ್ನಾಟಕ ಸರ್ಕಾರದ ಸಂಸ್ಥೆಯಾದ ಎಂಎಸ್‌ಐಲ್ ಇವರಿಗೆ ಒಪ್ಪಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಇವರ ಮುಖಾಂತರ ಪರೀಕ್ಷೆಯಲ್ಲಿ ಹಾಜರಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಯುಜಿಸಿ ನಿಯಮಾನುಸಾರ ಕ್ಯೂಆರ್ ಕೋಡ್ ಹೊಂದಿರುವ ಸೆಕ್ಯುರಿಟಿ ಮೇಜರ್ಸ್ ಅಳವಡಿಸಿದಂತಹ ಅಂಕಪಟ್ಟಿಯನ್ನು ಕಂಡುಕೊಳ್ಳಲು ನಿರ್ಧರಿಸಿ ಬೇರೆ ವಿಶ್ವವಿದ್ಯಾಲಯಗಳಲ್ಲಿ ಇರುವಂತಹ ದರಪಟ್ಟಿಗಳನ್ನು ಕುಲಂಕೂಷವಾಗಿ ಪರಿಶೀಲಿಸಿ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ನೀಡಿರುವಂತಹ ದರಪಟ್ಟಿಯಾದ ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದ್ದು, ಅದರನ್ವಯ ಸಿಂಡಿಕೇಟ್ ಸಭೆಯು ಈ ದರ ಪಟ್ಟಿಯನ್ನು ಒಪ್ಪಿ ಅನುಮೋದನೆ ನೀಡಿತು. ಸದರಿ ವೆಚ್ಚವನ್ನು ಆಯವ್ಯಯದಲ್ಲಿ ನಮೂದಿಸಿರುವ ಪರೀಕ್ಷಾ ವಿಭಾಗದ ಗಣಕೀಕರಣ ಬಜೆಟ್‌ನಲ್ಲಿ ಲಭ್ಯವಿರುವ ರೂ.2 ಕೋಟಿ ಹಣದಿಂದ ಭರಿಸಲು ತೀರ್ಮಾನಿಸಲಾಯಿತು.

| | | | |
|---|---|---|---|
| 01 | UE-11 | 250 Micron Tear Proof & Water Proof blank Marks Card/Certificate with Security Features and Invisible Security. (A4/ Custom Size) (Minimum 8 Security Features) | Rs. 38.33/- |
| 02 | NU-38 | Additional Security Feature : (IN COMPLIANCE WITH UGC) Secured Encrypted QR Code with Block-Chain Technology MD5 Hash Algorithm which supports real time verification through Mobile based application (Android) | Rs 42.57/- |

6) ಈಗಾಗಲೇ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ 36 ಜನ ಸಿಬ್ಬಂದಿಗಳಿಗೆ ವೇತನ ಬಿಡುಗಡೆ ಮಾಡುವ ಸಂಬಂಧ ಮಾನ್ಯ ಕುಲಸಚಿವರು ಚರ್ಚಿಸಲು ಅಧ್ಯಕ್ಷರ ಅನುಮತಿ ಕೋರಿದರು.

6) ಸರ್ಕಾರಕ್ಕೆ ಪತ್ರ ಬರೆದು, ಹೊರಗುತ್ತಿಗೆ ಆಧಾರದಮೇಲೆ ನೇಮಕಗೊಂಡಿರುವ 36 ಜನ ಸಿಬ್ಬಂದಿಗಳಿಗೆ ವೇತನ ಮಂಜೂರು ಮಡಿಸಿಕೊಳ್ಳಲು ತೀರ್ಮಾನಿಸಲಾಯಿತು. ಮುಂದುವರೆದು ಅಲ್ಲಿಯವರೆಗೆ (ಸರ್ಕಾರದಿಂದ ಅನುದಾನ ಮಂಜೂರಾಗುವ ವರೆಗೆ) ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲು ಸಿಂಡಿಕೇಟ್ ಸಭೆಯು ಒಪ್ಪಿಗೆ ಸೂಚಿಸಿತು.

| | | |
|---|---|---|
| | 7) ಕುಲಸಚಿವರು, 36 ಜನರ ನೇಮಕಾತಿ ನಂತರ ಇನ್ನೂಳಿದ ಕಾರ್ಯಭಾರಕ್ಕನುಗುಣವಾಗಿ ದಿನಗೂಲಿ ಆಧಾರದ ಮೇಲೆ ಸಿಬ್ಬಂದಿಗಳ ನೇಮಕಾತಿ ಬಗ್ಗೆ ಚರ್ಚಿಸಲು ಅಧ್ಯಕ್ಷರ ಅನುಮತಿ ಕೋರಿದರು. | 7) ರಾಯಚೂರು ವಿಶ್ವವಿದ್ಯಾಲಯದ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗಾಗಿ ಅವಶ್ಯಕವಾಗಿರುವ ಆಡಳಿತ, ಶೈಕ್ಷಣಿಕ ಹಾಗೂ ಪರೀಕ್ಷಾ ವಿಭಾಗಗಳಲ್ಲಿ ಸುಮಾರು 50 ರಿಂದ 60 ಜನ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಈ ಸಿಬ್ಬಂದಿಗಳನ್ನು ಏಪ್ರೀಲ್ 2023, ತಿಂಗಳಿಂದ ತಾತ್ಕಾಲಿಕವಾಗಿ ನೇಮಿಸಲು ಹಾಗೂ 11 ತಿಂಗಳುವರೆಗೆ ಅಥವಾ ಮುಂದಿನ ಆದೇಶದವರೆಗೆ ದಿನಗೂಲಿ/ಮಾಸಿಕ ವೇತನವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಪಾವತಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |

29/3/23

(ಪ್ರೊ. ವಿಶ್ವನಾಥ ಎಂ)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

29.3.2023

(ಪ್ರೊ. ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಸಭೆಯ ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.